ದೂರವಾಣಿ ಸಂಖ್ಯೆ : 080-22212343
ಫ್ಯಾಕ್ಸ್ ಸಂಖ್ಯೆ : 080-22278803
Website : https://kptcl.karnataka.gov.in

ಇ-ಮೇಲ್ ವಿಳಾಸ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ1999ಎಸ್‌ಜಿಸಿ025521
ಕಂಪನಿಯ ಅಧಿಕೃತ ಕಛೇರಿ : ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು-560 009

ಕವಿಪ್ರನಿನಿ/ಬಿ9/21473/2021-22

ದಿನಾಂಕ : - 4 JAN 2022

## ಸುತ್ತೋಲೆ

**ವಿಷಯ:-** ನಿಗಮದ ವಿವಿಧ ಕಚೇರಿಗಳಲ್ಲಿ ಅನುಪಯುಕ್ತಗೊಂಡಿರುವ ಹಳೆಯ ಜೆರಾಕ್ಸ್ ಯಂತ್ರಗಳು ಕಂಪ್ಯೂಟರ್, ಪ್ರಿಂಟರ್, ಕುರ್ಚಿ ಮತ್ತು ಟೇಬಲ್ ಇನ್ನಿತರ ಸಾಮಾಗ್ರಿಗಳನ್ನು ಹೊಸದಾಗಿ ಖರೀದಿಸುವಾಗ Buy back ಅಥವಾ Exchange offer ನಲ್ಲಿ ರಿಯಾಯಿತಿ ದರದಲ್ಲಿ ಖರೀದಿಸುವ ಬಗ್ಗೆ.

**ಉಲ್ಲೇಖ:-** ಕರ್ನಾಟಕ ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಸುತ್ತೋಲೆ ಸಂಖ್ಯೆ ಸಿಆಸುಇ 42 ಡಿಎಸ್‌ವೈ 2018 ದಿನಾಂಕ 12/10/2018.

* * * * * * * * *

ಕರ್ನಾಟಕ ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಕಾರ್ಯಕಾರಿ) ರವರ ದಿನಾಂಕ 12/10/2018 ರ ಸುತ್ತೋಲೆಯಲ್ಲಿ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಅನುಪಯುಕ್ತಗೊಂಡಿರುವ ಹಳೆಯ ಜೆರಾಕ್ಸ್ ಯಂತ್ರಗಳು, ಕಂಪ್ಯೂಟರ್, ಪ್ರಿಂಟರ್, ಕುರ್ಚಿ ಮತ್ತು ಟೇಬಲ್ ಇನ್ನಿತರ ಸಾಮಾಗ್ರಿಗಳನ್ನು ಖರೀದಿಸಿ ಬಳಕೆಯಾದ ನಂತರ ಸಣ್ಣಪುಟ್ಟ ದುರಸ್ತಿಗೊಳಪಡಿಸದೆ ಅವುಗಳನ್ನು ಅನುಪಯುಕ್ತವೆಂದು ತೀರ್ಮಾನಿಸಿ ಅವುಗಳನ್ನು ಉಗ್ರಾಣದಲ್ಲಿ dump ಮಾಡಿರುವುದನ್ನು ಮಾನ್ಯ ಮುಖ್ಯ ಕಾರ್ಯದರ್ಶಿಗಳು ದಿನಾಂಕ 11/09/2018 ರಂದು ವಿಕಾಸ ಸೌಧ ಹಾಗೂ ಬಹುಮಹಡಿ ಕಟ್ಟಡಗಳ ತಪಾಸಣೆ ಸಂದರ್ಭದಲ್ಲಿ ಗಮನಿಸಲಾಗಿದೆಯೆಂದು ತಿಳಿಸಲಾಗಿದೆ. ಸದರಿ ಉಪಕರಣಗಳ ಬಳಸುವಿಕೆಯ ಮುಂದುವರಿಕೆ ಬಗ್ಗೆ ತಾಂತ್ರಿಕ ಸಮಾಲೋಚಕರಿಂದ ಪರಿಶೀಲಿಸಿ, ಅವುಗಳ ಉಪಯುಕ್ತ, ಮೌಲ್ಯ ಮತ್ತು ಬಾಳಿಕೆಯ ಬಗ್ಗೆ ಹಾಗೂ ಇನ್ನಿತರ ತಾಂತ್ರಿಕ ಅಂಶಗಳನ್ನು ಪರಿಶೀಲಿಸಿಕೊಂಡು ಹಾಲಿ ಉಪಯೋಗಿಸುತ್ತಿದ್ದ ಹಳೆಯ ವಸ್ತುಗಳನ್ನು ಸರಬರಾಜುದಾರರಿಗೆ ಹಿಂದಿರುಗಿಸಿ Buy back ಅಥವಾ Exchange offer ಡೀಲ್ ಆಧಾರದಲ್ಲಿ ಹೊಸ ವಸ್ತುಗಳನ್ನು ರಿಯಾಯಿತಿ ದರದಲ್ಲಿ ಖರೀದಿಸಲು ಎಲ್ಲಾ ಇಲಾಖೆಗಳು ಕ್ರಮವಹಿಸಬೇಕೆಂದು ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ಈ ಹಿನ್ನೆಲೆಯಲ್ಲಿ, ನಿಗಮದ ಎಲ್ಲಾ ಕಚೇರಿಗಳಲ್ಲೂ ಸಹ ಸದರಿ ಸುತ್ತೋಲೆಯಲ್ಲಿನ ನಿರ್ದೇಶನದಂತೆ ಅನುಪಯುಕ್ತ ಹಳೆಯ ಜೆರಾಕ್ಸ್ ಯಂತ್ರಗಳು, ಕಂಪ್ಯೂಟರ್, ಪ್ರಿಂಟರ್, ಕುರ್ಚಿ ಮತ್ತು ಟೇಬಲ್ ಇನ್ನಿತರ ಸಾಮಾಗ್ರಿಗಳನ್ನು ಖರೀದಿಸಿ ಬಳಕೆಯಾದ ನಂತರ ಸಣ್ಣಪುಟ್ಟ ದುರಸ್ತಿಗೊಳಪಡಿಸಿ ಮರುಉಪಯೋಗಿಸಲು ಕ್ರಮಕೈಗೊಳ್ಳುವುದು. ಸದರಿ ಉಪಕರಣಗಳ ಬಳಸುವಿಕೆಯ ಮುಂದುವರಿಕೆ ಬಗ್ಗೆ ಪರಿಶೀಲಿಸಿ, ಅವುಗಳ ಉಪಯುಕ್ತ, ಮೌಲ್ಯ ಮತ್ತು ಬಾಳಿಕೆಯ ಬಗ್ಗೆ ಹಾಗೂ ಇನ್ನಿತರ ತಾಂತ್ರಿಕ ಅಂಶಗಳನ್ನು ಪರಿಶೀಲಿಸಿಕೊಂಡು ನಂತರ ಅನುಪಯುಕ್ತಗೊಂಡಿರುವ ವಸ್ತುಗಳ ಬದಲು ಹೊಸದಾಗಿ ಖರೀದಿಸುವ ಸಂದರ್ಭದಲ್ಲಿ ಸಂಬಂಧಪಟ್ಟ ಸರಬರಾಜುದಾರರಿಗೆ ಹಿಂದಿರುಗಿಸಿ Buy back ಅಥವಾ Exchange offer ನಲ್ಲಿ ಹೊಸ ವಸ್ತುಗಳನ್ನು ರಿಯಾಯಿತಿ ದರದಲ್ಲಿ ಖರೀದಿಸಲು ಕ್ರಮಕೈಗೊಳ್ಳುವಂತೆ ಸೂಚಿಸಲಾಗಿದೆ.

B R 04/01/22

ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ)
ಕವಿಪ್ರನಿನಿ, ಬೆಂಗಳೂರು.

B.S. 05/01/22
AEES
6/1/21

SE(IT&MIS)

**ಪ್ರತಿಗಳು:-**

1. ಎಲ್ಲಾ ಮುಖ್ಯ ಇಂಜಿನಿಯರುಗಳು (ವಿ), ಕವಿಪ್ರನಿನಿ.
2. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ.
3. ಕಂಪನಿ ಕಾರ್ಯದರ್ಶಿ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
4. ಎಲ್ಲಾ ಅಧೀಕ್ಷಕ ಇಂಜಿನಿಯರ್ (ವಿ)/ (ಸಿವಿಲ್), ಕವಿಪ್ರನಿನಿ.
5. ಎಲ್ಲಾ ಲೆಕ್ಕ ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ.
6. ಅಧೀಕ್ಷಕ ಇಂಜಿನಿಯರ್ (ವಿ), (ಐಟಿ ಮತ್ತು ಎಂಐಎಸ್), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು – ನಿಗಮದ ಅಂತರ್ಜಾಲದಲ್ಲಿ ಪ್ರಕಟಿಸಲು
7. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರುಗಳು (ವಿ)/ (ಸಿವಿಲ್), ಕವಿಪ್ರನಿನಿ.
8. ಎಲ್ಲಾ ಉಪಲೆಕ್ಕ ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ.
9. ವ್ಯವಸ್ಥಾಪಕ ನಿರ್ದೇಶಕರು/ ನಿರ್ದೇಶಕರು (ಹಣಕಾಸು)/ ನಿರ್ದೇಶಕರು (ಪ್ರಸರಣ)/ ನಿರ್ದೇಶಕರು (ಆ ಮತ್ತು ಮಾ. ಸಂ) ರವರುಗಳ ಹಿರಿಯ ಆಪ್ತ ಕಾರ್ಯದರ್ಶಿಗಳು, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.